ಇ) ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲಕರವಾದ ಈ ಯೋಜನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುವುದೆ ?

ಶ್ರೀ ಬಿ ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ಸಚಿವರು) :

ಅ) ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಮತ್ತು ಹಲಗೂರು ಗ್ರಾಮಗಳನ್ನು ಮೊದಲನೇ ಹಂತದ ಸ್ವಚ್ಛ ಗ್ರಾಮ ಯೋಜನೆಯಡಿ ಆಯ್ಕೆ ಮಾಡಿದ್ದು, ಈವರೆವಿಗೆ ರೂ. 12.15 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) 2004–05ರ ಸಾಲಿನಲ್ಲಿ ಮಳವಳ್ಳಿಯ ಕೊನ್ನಾಪುರ ಗ್ರಾಮವನ್ನು 2ನೇ ಹಂತದ ಸ್ವಚ್ಛ ಗ್ರಾಮ ಯೋಜನೆಯಡಿ ಆಯ್ಕೆ ಮಾಡಲಾಗಿದೆ.

ಇ) ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧರಿಸಿ ಈ ಯೋಜನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ.

1112 (1309) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬಿಜಾಪುರ ಮತಕ್ಷೇತ್ರದಲ್ಲಿ ಇರುವ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಕಾಲೇಜು ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ ;

ಇ) ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜುಗ ಮಂಜೂರು ಮಾಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಎರಡು.

ಆ) ಬಿಜಾಪುರ ನಗರದಲ್ಲಿ 21 ಮತ್ತು ಇದೇ ತಾಲ್ಲೂಕಿನಲ್ಲಿ ಒಂದು ಅಂದರೆ ಒಟ್ಟು 22 ಕಾಲೇಜುಗಳು ಇರುತ್ತವೆ. ಹೆಚ್ಚಿನ ಕಾಲೇಜಿನ ಅವಶ್ಯಕತೆ ಇರುವುದಿಲ್ಲ.

ಇ) ಬಿಜಾಪುರ ನಗರದಲ್ಲಿ 12 ಖಾಸಗಿ ಅನುದಾನಿತ, 7 ಅನುದಾನರಹಿತ ಹಾಗೂ 2 ಸರ್ಕಾರಿ ಪದವಿ ಪೂರ್ವ ಕಾಲೇಜು ಇರುತ್ತವೆ. (ಒಟ್ಟು 21) ಈ ಕಾಲೇಜುಗಳಲ್ಲಿಯೇ ವಿದ್ಯಾರ್ಥಿಗಳಿಗೆ ಇನ್ನು ಹೆಚ್ಚಿನ ಪ್ರವೇಶಾವಕಾಶವಿರುತ್ತದೆ. ಆದ್ದರಿಂದ ಬಿಜಾಪುರ ನಗರದಲ್ಲಿ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಅಗತ್ಯತೆ ಇರುವುದಿಲ್ಲ.

1113 (1310) ಶ್ರೀ ಅಪ್ಪ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮಹಿಳಾ ವಿಶ್ವ ವಿದ್ಯಾನಿಲಯವನ್ನು ಹೊಂದಿರುವ ಬಿಜಾಪುರ ನಗರದಲ್ಲಿ ಸರ್ಕಾರ ಪ್ರಥಮ ದರ್ಜೆ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕಾಲೇಜು ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ ;

ಇ) ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?